# ಕೆ.ಶಿವರಾಮ ಕಾರಂತರ ‘ಕಿಸಾಗೋತಮಿ’: ತಾತ್ವಿಕ ವಿಶ್ಲೇಷಣೆ

**ಭಂತೆ ಕಲ್ಯಾಣ ಸಿರಿ***

**DOI: https://doi.org/10.5281/zenodo.23096882**

**ABSTRACT**

ಕೆ. ಶಿವರಾಮ ಕಾರಂತರ ಪ್ರಥಮ ಬೌದ್ಧ ಗೀತನಾಟಕ ‘ಕಿಸಾಗೋತಮಿ’ಯ ತಾತ್ವಿಕ ಹಾಗೂ ಮನೋವೈಜ್ಞಾನಿಕ ಆಯಾಮಗಳನ್ನು ಇಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಮಗುವನ್ನು ಕಳೆದುಕೊಂಡು ಶೋಕತಪ್ತಳಾದ ತಾಯಿ ಕಿಸಾಗೋತಮಿಗೆ, ಬುದ್ಧರು ‘ಸಾವಿಲ್ಲದ ಮನೆಯ ಸಾಸಿವೆ’ ತರುವಂತೆ ಸೂಚಿಸುತ್ತಾರೆ. ಆ ಮೂಲಕ ಸಾವಿನ ಸಾರ್ವತ್ರಿಕ ಹಾಗೂ ಅನಿವಾರ್ಯ ಸತ್ಯವನ್ನು ಆಕೆ ಸ್ವತಃ ಅರಿತುಕೊಳ್ಳುವಂತೆ ಮಾಡುವ ಈ ಪ್ರಾಯೋಗಿಕ ವಿಧಾನವನ್ನು, ಆಧುನಿಕ ಮನಃಶಾಸ್ತ್ರದ ‘ಜ್ಞಾನ ಗ್ರಹಣದ ವರ್ತನೆಯ ಚಿಕಿತ್ಸೆ’ಗೆ (CBT) ಸಮೀಕರಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಜಾನಪದ ಮತ್ತು ಮಾರ್ಗ ಪದ್ಧತಿಗಳ ಸುಂದರ ಸಂಯೋಜನೆಯಿರುವ ಈ ಕೃತಿಯು ಬೌದ್ಧ ಧರ್ಮದ ‘ಅನಿತ್ಯತೆ’ಯ ತತ್ವವನ್ನು ಕಾವ್ಯಾತ್ಮಕವಾಗಿ ಕಟ್ಟಿಕೊಡುತ್ತದೆ. ತಾಯಿಯ ಕರುಳಿನ ತವಕ, ಆನಂದನ ಸಾಂತ್ವನ ಹಾಗೂ ಬುದ್ಧರ ವೈಚಾರಿಕ ಚಿಕಿತ್ಸೆಯ ಹಿನ್ನೆಲೆಯಲ್ಲಿ ಮನುಷ್ಯನಿಗೆ ಅಂಟಿರುವ ಮೋಹ, ದುಃಖ ಮತ್ತು ಭ್ರಾಂತಿಯನ್ನು ಕಳಚಿ ವಾಸ್ತವದ ಬದುಕಿಗೆ ಮುಖಮಾಡುವ ಬಗೆಯನ್ನು ಬಹು ಮಾರ್ಮಿಕವಾಗಿ ತೆರೆದಿಡಲಾಗಿದೆ.

**KEYWORDS:** ಕಿಸಾಗೋತಮಿ, ಗೀತನಾಟಕ, ಬೌದ್ಧ ತತ್ವ, ಜ್ಞಾನ ಗ್ರಹಣದ ವರ್ತನೆಯ ಚಿಕಿತ್ಸೆ (CBT), ಅನಿತ್ಯತೆ.

* **ಭಂತೆ ಡಾ. ಕಲ್ಯಾಣ ಸಿರಿ,** ವಿಶ್ವ ಮೈತ್ರಿ ಬುದ್ಧವಿಹಾರ, ಮೈಸೂರು.

ಉತ್ತರಾಧಿಯ ಗಾನದ ಗತಿಯಲ್ಲಿ 1940ರಲ್ಲಿ ಶಿವರಾಮ ಕಾರಂತರಿಂದ ರಚಿತವಾದ ಅವರ ಪ್ರಥಮ ಬೌದ್ಧ ಗೀತನಾಟಕ 'ಕಿಸಾಗೋತಮಿ'. ಇದನ್ನು ಬರೆಯುವಲ್ಲಿ 'ಜಾನಪದ' ಪದ್ಧತಿ ಮತ್ತು 'ಮಾರ್ಗ' ಪದ್ಧತಿಯನ್ನು ಆಶ್ರಯಿಸಿರುವುದಾಗಿ ಸ್ವತಃ ಕಾರಂತರೇ ಹೇಳಿದ್ದಾರೆ. ಈ ವಿಧಾನಗಳೆರಡೂ ನಾಟಕದಲ್ಲಿನ ಸಂದರ್ಭ ಸನ್ನಿವೇಶಗಳನ್ನು ನಿರ್ವಹಿಸುವ ಪೂರಕ ತಂತ್ರಗಳಾಗಿ ಬಳಕೆಯಗೊಂಡಿವೆ. ಹಾಗಾಗಿ ಈ ನಾಟಕವು ನಮ್ಮ ದೇಶೀಯ ಬಯಲಾಟದ ಮಾದರಿಯನ್ನು ಹೋಲುತ್ತದೆ. ರಾಗ ಲಯಗಳ ನಾದ ಲಹರಿಯಲ್ಲಿ ಬೌದ್ಧತತ್ವದ ಸಾರವನ್ನು ಹಿಡಿದಿಟ್ಟು, ಕಿಸಾಗೋತಮಿಯ ದುರಂತಕತೆಯನ್ನು ನಾಲ್ಕು ದೃಶ್ಯಗಳಲ್ಲಿ ಕಾವ್ಯಮಯವಾಗಿ ಚಿತ್ರಿಸಿರುವ ಕಾರಂತರು, ಈ ಗೀತನಾಟಕದಲ್ಲಿ ಮುಲ್ತಾನಿ, ದೇಸಕಾರ್, ಹೋರಿ ಕಾಫಿ, ಕಾಮೋದ, ಮಾಂಡ್, ವಿಭಾಸ್, ಭೈರವಿ ಎಂಬ ರಾಗಗಳನ್ನು ಬಳಕೆಮಾಡಿದ್ದು ಆ ಮೂಲಕ ಪ್ರಾಸಂಗಿಕವಾಗಿ ಕಥಾಹಂದರವನ್ನು ಗೀತರೂಪದಲ್ಲಿ ಬಿತ್ತರಿಸಿದ್ದಾರೆ.

ಮಗುವನ್ನು ಕಳೆದುಕೊಂಡು ಮಾನಸಿಕ ತೊಳಲಾಟದ ವಿಕೃತಿಗೆ ಒಳಗಾದ ಕಿಸಾಗೋತಮಿಯ ಮನೋವಿಕಲ್ಪಕ್ಕೆ ಮದ್ದಾಗಿ ಬುದ್ಧಗುರು; ಸಾವಿಲ್ಲದ ಮನೆಯ ಸಾಸಿವೆ ತರುವ ನೆವದಲ್ಲಿ ಸ್ವತಃ ಆಕೆಯೇ ಸಾವಿನ ವಿಶ್ವವ್ಯಾಪಿ ಸಂಗತಿಯನ್ನು ಅರ್ಥೈಸಿಕೊಳ್ಳುವಂತೆ ಮಾಡುವ ಚಿಕಿತ್ಸಕ ವಿಧಾನವೇ 'ಕಿಸಾಗೋತಮಿ' ನಾಟಕದ ಕಥಾವಸ್ತು. ಈ ವಿನೂತನ ಮನೋವೈಜ್ಞಾನಿಕ ಚಿಕಿತ್ಸೆಯನ್ನು ಮನಶಾಸ್ತ್ರದಲ್ಲಿ 'ಜ್ಞಾನ ಗ್ರಹಣದ ವರ್ತನೆಯ ಚಿಕಿತ್ಸೆ' (ಕಾಗ್ನಿಟಿವ್ ಬಿಹೇವಿಯರ್ ಥೆರಪಿ–C.B.T.) ಎಂದು ಕರೆಯುತ್ತಾರೆ. ಬುದ್ಧರ ಇಂಥ ವಿಶಿಷ್ಟ ಚಿಕಿತ್ಸಕ ಗುಣಧರ್ಮವನ್ನು ಮನಗಂಡ ವಿಜ್ಞಾನವು ಆ ತತ್ವ ಸಿದ್ಧಾಂತವನ್ನು ಒಪ್ಪಿ ಪುರಸ್ಕರಿಸುವುದಲ್ಲದೇ ಅದರ ಸದ್ಬಳಕೆಯ ಅಗತ್ಯತೆ ಮತ್ತು ಬೌದ್ಧಿಕ ಲಾಭವನ್ನು ಮಾನ್ಯ ಮಾಡಿದೆ.

'ಒಂದು ಕಣ್ಣು ಕಣ್ಣಲ್ಲ, ಒಬ್ಬ ಮಗ ಮಗನಲ್ಲ...' ಎನ್ನುವ ಜಾನಪದ ನುಡಿಗಟ್ಟು ಪುರಾತನವಾದರೂ ಎಲ್ಲಾ ಕಾಲಕ್ಕೂ ಸಲ್ಲುವಂತೆ, ಹೆತ್ತವರ ಕರುಳ ಇಂಗಿತವನ್ನು ಮತ್ತೆ ಮತ್ತೆ ಎತ್ತಾಡಿಸುತ್ತದೆ. ತಾಯಿ ತನಗೆ ತಾನೇ ಸರಿಸಾಟಿಯಾದ ತ್ಯಾಗಮಯಿ. ತಾಯ್ತನಕ್ಕೆ ಜಗತ್ತು ತಲೆಬಾಗಿದೆ. ಜಗ ತೂಗುವ ಜನನಿಯಾಗಿ ಲೋಕಮಾನ್ಯತೆ ಗಳಿಸಿದ ತಾಯಿಯ ಕಾಯಕ ದೊಡ್ಡದು. ನವಮಾಸ ಹೊಟ್ಟೆಯಲ್ಲಿ ಹೊತ್ತು ಹೆತ್ತು ಕರುಳಕುಡಿಯ ಜೋಪಾನದಿ ಸಾಕಿ ಸಲಹುವ ತಾಯಿಯ ತನ್ಮಯತೆ ಚಿನ್ಮಯವಾದುದು. ಕರುಳ ಕಣ್ಣಿಗೆ ಕಿಂಚಿತ್ತು ನೋವಾದರೂ ಯಾವ ತಾಯಿಯೂ ಸಹಿಸುವುದಿಲ್ಲ. ಇನ್ನು ಅದರ ಪ್ರಾಣಪಕ್ಷಿಯೇ ಹಾರಿತೆಂದರೆ ! ಸಂಕಟ ಮುಗಿಲು ಮುಟ್ಟುತ್ತದೆ. ಕಂಬನಿ ಕಡಲಾಗುತ್ತದೆ. ಮನಸು ಧೃತಿಗೆಟ್ಟು, ಬದುಕು ಬಣ್ಣಗೆಟ್ಟು, ಬರಿದಾದ ಬಾಳು, ಮೂಕವಾದ ಜಗತ್ತು, ಏಕವಾದ ಹಗಲು ರಾತ್ರಿಗಳು ಚಿತ್ರವಿಚಿತ್ರವಾಗಿ ಸಾವಿನ ಸೂತಕದಲ್ಲಿ ಮುಳುಗೇಳಿಸುತ್ತವೆ. ಇಂತಹದೇ ಘೋರವಾದ ದುಃಖ ಕಿಸಾಗೋತಮಿಗೆ ಬಹುಬಾಗಿ ಕಾಡಿರುವ ವಿಸ್ಮಯ ಸಂಗತಿ ಕಾರಂತರ ಈ ಗೀತನಾಟಕದಲ್ಲಿ ಮಾರ್ಮಿಕವಾಗಿ ವ್ಯಕ್ತಗೊಳ್ಳುತ್ತದೆ.

‘ಹಗಲೆಲ್ಲ......ಕತ್ತಲಾಯ್ತು ಬಾಳೆಲ್ಲ......ಬರಿದು ಆಯ್ತು ಜಗವೆಲ್ಲ...... ಮಾಯವಾಯ್ತು ಬೆಳಗಿಪರು ಯಾರಿದನು? ತೊಳಗಿಪರು ಯಾರಿದನು? ಮುಳುಗಿದೆನ್ನಯ ರವಿಯ ತೇಲಿಪರು ಯಾರು?’ ಎಂದು

ಸತ್ತ ಕಂದನ ಕಳೇಬರವ ಎದೆಗೊತ್ತಿಕೊಂಡು ರೋಧಿಸುತ್ತ ಅದನ್ನು ಬದುಕಿಸಿಕೊಳ್ಳುವ ಒಂದೇ ಚಡಪಡಿಕೆಯಲ್ಲಿ ದಿಕ್ಕು ತೋಚದೆ ಪೇಚಾಡುತ್ತಿದ್ದ ಕಿಸಾಗೋತಮಿಯ ಅಂತರಂಗದ ಅಳಲು, ಗಿಡಮೂಲಿಕೆಯನ್ನರಸಿ ಅತ್ತ ಕಡೆಯೇ ಧಾವಿಸುತ್ತಿದ್ದ ಆನಂದನಿಗೆ ಮುಟ್ಟುವುದು. ಕೂಡಲೆ ಆಶ್ಚರ್ಯ ಚಕಿತನಾದ ಆತನು ಅರಣ್ಯಪೂರ ಹಬ್ಬಿರುವ ಆ ಚೀರುಧ್ವನಿ ಯಾರದೆಂದು ತಿಳಿಯಲು ಕುತೂಹಲಿಸುತ್ತಾನೆ.

‘ಯಾರು ಮರುಗುವರಿಲ್ಲಿ... ಈ ಶಾಂತವನದಲ್ಲಿ ಬುದ್ಧನಿಹ ನೆಲೆಯಲ್ಲಿ !... ತಿಳಿವಿನಾಗರದಲ್ಲಿ !.’

ಆನಂದನ ಅನುಕಂಪ ತುಂಬಿದ ಇಲ್ಲಿನ ವಿಚಾರಿಸುವಿಕೆಯಲ್ಲಿ ಉಪಚರಿಸಿ ಉಪಕರಿಸುವ ಉತ್ಸುಕಭಾವವಿದೆ. ಇದು ಆಕ್ರಂದನಕ್ಕೆ ತುಪ್ಪಸುರಿವ ಅಶಾಂತಿಯನ್ನು ಬಗ್ಗುಬಡಿದು, ಶಾಂತಚಿತ್ತರಾದ ಬುದ್ಧರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುವ ಚಿನ್ನುಡಿಯಂತೆ ಹೊಮ್ಮುವುದು.

ಈ ಸನ್ನಿವೇಶದಲ್ಲಿ ಮರಣ ಹೊಂದಿದ ತನ್ನ ಹಸುಗೂಸಿಗೆ ಹೇಗಾದರೂ ಮರಳಿ ಜೀವಕಳೆ ಕರುಣಿಸುವಂತೆ ‘ಆನಂದ’ನಲ್ಲಿ ಭಿನ್ನವಿಸಿಕೊಳ್ಳುವ ಗೋತಮಿಗೆ ಆತನ ತಾತ್ವಿಕ ಮಾತುಗಳು ಅನುಪಯುಕ್ತ ಎನಿಸುತ್ತವೆ. ಅಲ್ಲದೆ ಆಕೆಯ ಸ್ಥಿತಿಯನ್ನು ಅಣಕಿಸುವ ಆಡಿಕೆ ತೋಡಿಕೆಗಳಾಗಿ ವ್ಯಸನಗೊಳಿಸುತ್ತವೆ. ಭೌತಿಕವಾಗಿ ದೇಹವನ್ನಗಲಿದ ಜೀವಮಾತ್ರವಲ್ಲ, ಗತಿಸಿದ ಯಾವೊಂದು ವಸ್ತುವು ಪುನಃ ಸಿಗುವುದಿಲ್ಲ. ಈ ವಾಸ್ತವಾಂಶವನ್ನು ಗೋತಮಿಗೆ ಗೊತ್ತುಪಡಿಸುವ ಪ್ರಯತ್ನದಲ್ಲಿ ಆನಂದ ನಾಡಿದ ಪ್ರಜ್ಞಾಪದಗಳಿವು ;

‘ತಾಯೆ, ಕಳೆದ ದಿನವೂ... ಮರಳಲುಂಟೆ? ತಾಯೆ, ಬಾಡಿದರಳು... ತೆರೆಯಲುಂಟೆ? ತಾಯೆ, ಸರಿದ ಬಾಳ್ವೆ... ಬರಲು ಉಂಟೆ?’

ಇಲ್ಲಿನ ಅರ್ಥವತ್ತಾದ ನುಡಿ ಎಷ್ಟು ಶಕ್ತವಾಗಿದ್ದರು ದುಃಖತಪ್ತ ತಾಯ್ತನದ ಕಣ್ಣು ತೆರೆಸುವುದಿಲ್ಲ, ಮತ್ತೆ ಅದೇ ಪ್ರಲಾಪ ‘ಸತ್ತ ಕೂಸು ಬಾಳಲಿ’ ಎಂದು ಹರಸುವಂತೆ ಆನಂದನಲ್ಲಿ ಅರಿಕೆ. ಇದು ಸಾಮಾನ್ಯವಾಗಿ ಎಲ್ಲಾ ತಾಯಿಂದಿರ ‘ಕರುಳಕರೆ’ಯಾದರೂ ಈಕೆಯ ಕೋರಿಕೆ ವಿಸ್ಮಯವೆನಿಸುತ್ತದೆ.

ಹರಸಲು ನಾನಾರು? ನಾನು ನಿನ್ನಂತೆಯೆ ಅರಿಯದವನೆಂದು ಗೋತಮಿಯನ್ನು ಬುದ್ಧನೆಡೆಗೆ ಕರೆದೊಯ್ಯುವ ಆನಂದನ ಔದಾರ್ಯ ಅರಳಿಸುವಂತದು. ಇಲ್ಲಿ ಉಚಿತವಾಗಿ ಬಳಸಿರುವ ‘ತಾಯೆ’, ‘ಬಾ ತಂಗಿ’, ‘ತಾರವ್ವ’, ಎನ್ನುವ ಪದಗಳು ಬೌದ್ಧ ಸಂಘದಲ್ಲಿದ್ದ ‘ಮಾತೃತ್ವ’ ಮತ್ತು ‘ಭ್ರಾತೃತ್ವ’ವನ್ನು ಉನ್ನತೀಕರಿಸುವ ಸಾಂಕೇತಿಕ ನುಡಿಗಳಾಗಿವೆ.

‘ಸುಳ್ಳು’ ಎಷ್ಟೇ ವೈಭವೀಕರಿಸಿದರೂ ‘ನಿಜ’ ಆಗುವುದಿಲ್ಲ. ದಿಟ ದಿನದ ಪಥ್ಯವಾಗಬೇಕು. ಸತ್ಯವಂತರಿಗೆ ಸಿಗುವ ಆನಂದ ಅನಂತವಾದುದು. ದಾನ, ಧ್ಯಾನ, ದಯೆ, ಕರುಣೆ ಅರಿವಿನಲ್ಲಿ ‘ಆನಂದ’ ಅರಳುತ್ತದೆ. ‘ಮಾಯೆ’ಗಂಟದ ನಿಜದ ನಂಟು ಸದಾನಂದ ನೀಡುವುದಲ್ಲದೆ ಸರಿ ದಾರಿ ತೋರುತ್ತದೆ. ಯಾರು ನಿತ್ಯಾನಂದಕ್ಕೆ ಹಾತೊರೆಯುವರೋ ಅವರಿಗೆ ನೈಜತೆಯ ನೆಲೆ, ಬೆಲೆಯ ಅಂತರಾಳದ ಅರಿವಿರಬೇಕೆಂದು ಆನಂದನೊಂದಿಗೆ ತರ್ಕಿಸುತ್ತಿದ್ದ ಬುದ್ಧಗುರು ಒಡನೆಯೆ ಆತ ಹೊತ್ತು ತಂದ ಸಂತಾಪದ ಕರೆಗೆ ಓಗೊಟ್ಟು ಗೋತಮಿಯ ದುಗುಡವೇನೆಂದು ತಿಳಿಯಲಿಚ್ಛಿಸುವುದು ನೊಂದ ಮಗಳ ಸಂತಹಿಸುವ ಮಹಾಮಾತೃ ಹೃದಯದಂತೆ ಮಿಡಿಯುತ್ತದೆ.

ಅಗಲಿದ ಕಂದನ ಕಳವಳದಲ್ಲಿ ದಿಗಿಲಾದ ಕಿಸಾಗೋತಮಿ, ಇದ್ದ ಒಂದು ಮಗುವನ್ನು ಕಳೆದುಕೊಂಡ ತಬ್ಬಲಿ ತಾಯಿಂದಿರ ಕರುಳ ವೇದನೆಯನೆಲ್ಲಾ ತನ್ನೊಬ್ಬಳಲ್ಲೇ ತುಂಬಿಕೊಂಡಂತೆ ಮರುಗುತ್ತಾಳೆ. ಹಾಲುಗೆನ್ನೆಯ ಹಸುಗೂಸು ಬೆರಗು ತಂದ ಒಡನಾಟದ ಮರಳಿ ಬರದೇಹ ಕ್ಷಣಗಳನ್ನು ಮೆಲುಕು ಹಾಕುತ್ತ ಕೊರಗುತ್ತಾಳೆ.

‘ಒಂದೇ ಕೂಸಿದು ಚಿನ್ನ, ಬಂದು ನಲಿಸಿತ್ತು ಎನ್ನ ನಕ್ಕು ನಗಿಸಿತ್ತು ಮನವ ಬೆರಗುಗೊಳಿಸಿತ್ತು ದಿನವ ಈ ಬೆಳಕು ಕಡು ಕ್ರೂರ ನಿದ್ದೆ ಕವಿದಿದೆ ಶಿಶುಗೆ... ಪೊಗದದು ದೂರ ; ಮೊಗಕೆ ಸೊಗವದು ಭಾರ ಎದೆಗೆ... ಬೆಚ್ಚನೆ... ತೋರ. ಕೊಡಿಸುವೆಯಾ ಕಂದನನು? ನಲಿಸುವೆಯಾ ಚಂದಿರನ? ಬೆಳಗುವೆಯಾ ಬಾಂದಳವ? ತೊಳಿಸುವೆಯಾ ಜೀವಿತವ?

ಕಿಸಾಗೋತಮಿಯ ಈ ಭಾವೋದ್ವೇಗದಲ್ಲಿ ತಾಯ್ತನದ ತುಡಿತವಿದೆ. ಮಡಿಲು ಬರಿದಾದ ಒಡಲ ಸಂಕಟವಿದೆ. ಸಹಿಸದ ದುಮ್ಮಾನದಿಂದ ತನ್ನ ಕರುಳ ಬಳ್ಳಿಯ ಕಾಪಾಡುವಂತೆ ಬುದ್ಧರಲ್ಲಿ ಭಿನ್ನವಿಸಿಕೊಳ್ಳುವ ಆಕೆಯ ಮನಸ್ಸಿಗೆ ಸತ್ತ ಮಗುವು ಮಲಗಿದಂತೆ ಭಾಸವಾಗುತ್ತದೆ. ಇಂತಹ ಪರಿಭಾವನೆ ತಾಯಿಂದಿರಲ್ಲಿ ಸಾಮಾನ್ಯವೆನಿಸಿದರೂ ಗೋತಮಿಯ ಭಾವುಕತೆ ಬೆರಗುಗೊಳಿಸುವಂತದು.

ಸಾವಿನ ಸಹಜತೆಯ ಸತ್ಯ ಮರೆತು ವಿಚಲಿತಳಾದ ಗೋತಮಿಯ ಮನೋವ್ಯಾಕುಲತೆ ಗ್ರಹಿಸಿ ಸ್ವಯಂ ಆಕೆಯೇ ತನ್ನ ‘ಭ್ರಾಂತಿ’ಯನ್ನು ನಿವಾರಿಸಿಕೊಳ್ಳುವ ಆಲೋಚನಾ ಹಿನ್ನೆಲೆಯಲ್ಲಿ ಬುದ್ಧಗುರು;

‘ಸಾವು ಕಾಣದ ಮನೆಯ ಸಾಸಿವೆ ತಾರವ್ವ.’

ಎಂದು ಸೂಚಿಸುವುದು ಸಮ್ಮತವಾದ ಸೂಕ್ತ ಪರಿಹಾರೋಪಾಯವೇ. ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇರುವ ಇಲ್ಲಿನ ‘ಸಾಸಿವೆ’ ಪಾತ್ರ ಕ್ರಿಯಾತ್ಮಕ ಪರಿವರ್ತನೆಯ ಪ್ರತಿರೂಪವಾಗಿದೆ. ವಿಶೇಷವೆಂದರೆ, ನಿತ್ಯ ಬಳಕೆಯ ವಸ್ತುವಾಗಿ ಪ್ರತಿಯೊಬ್ಬರಿಗೂ ಚಿರಪರಿಚಿತವಾದ ‘ಸಾಸಿವೆ’ಯನ್ನೇ ಬುದ್ಧರು ತನ್ನ ಬೋಧನಾ

ಚಿಕಿತ್ಸಕ 'ಪರಿಕರ'ವಾಗಿ ಉಪಯೋಗಿಸಿಕೊಂಡಿರುವುದು ಅವರೊಲಿದ್ದ ಪ್ರಾಕೃತಿಕ ಔಚಿತ್ಯ ಪ್ರಜ್ಞೆಯ ಪ್ರತೀಕವೆನಿಸುತ್ತದೆ.

'ಸಾಸಿವೆ' ಸುಲಭವಾಗಿ ಸಿಗುವ ಮದ್ದೆಂದು ಬಗೆದು ಹಾದಿ, ಬೀದಿಯೊಳು ಅಲೆದಾಡಿ ಮನೆ ಮನೆಯ ಮುಂದೆ ಸಾಸಿವೆಯನ್ನು ಯಾಚಿಸುವ ಕಿಸಾಗೋತಮಿಗೆ ಸಾಸಿವೆ ಸಿಕ್ಕಿತೆ ಹೊರತು ಸಾವಿಲ್ಲದ ಮನೆಯ ಸಾಸಿವೆ ಸಿಗಲಿಲ್ಲ. ಪ್ರತಿ ಮನೆ ಮನವು ಸಾವಿನ ಸೂತಕದ ಸುರುಳಿಯಲ್ಲಿ ಸಿಕ್ಕಿ ನಲುಗುವುದನ್ನು ಕಂಡು ಬುದ್ಧರೆಡೆಗೆ ಬರಿಗೈಲಿ ಮರಳುತ್ತಾಳೆ. ಚಿಂತಾಕ್ರಾಂತಳಾದ ಗೋತಮಿಯ ಮರುಳುತನವ ಕೊನೆಗಾಣಿಸಿ ಆಕೆಯ ಮನವ ತಿಳಿಗೊಳಿಸುತ್ತ ಬುದ್ಧರು ಬೋಧಿಸಿದ ಭೌತಿಕ ಸತ್ಯ ವಿಂತಿಹುದು,

'ಸಾವಿಲ್ಲದೆಡೆಯಿಲ್ಲ, ನೋವಿಲ್ಲದೆಡೆಯಿಲ್ಲ ಸಾವು ಜೀವಕೆ ನಂಟು, ಅದ ತಪ್ಪಿಸ ಸಲ್ಲ. ಸಾವಿನೊಳು ಮರುಗದಿರು ಜೀವದೊಳು ಹಿಗ್ಗದಿರು ಕನಸಿಗಾಗಲುತಿರುವೆ, ಇದುವೆ ಘನವೆ? ಎಲ್ಲ ಕನಸಿನ ಆಟ... ನಿನ್ನ ಕೂಸಿನ ಬೇಟ; ಅಷ್ಟೆ ಸುಳ್ಳಿನ ಆಟ... ಈ ಸಾವಿನಾಟ ! ಅದಕೆ ಮೋಹವೆ ಪೇಳು, ಅದಕೆ ಕೊರಗೇ ಹೇಳು?'

ಹುಟ್ಟು–ಸಾವುಗಳ ನಂಟಿನ ಸ್ವಾಭಾವಿಕ ಕ್ರಿಯೆಯನ್ನು ಸರಳವಾದ ಪದಗಳಲ್ಲಿ ಅರ್ಥೈಸುವ ಇಲ್ಲಿನ ಲೌಕಿಕ ಪರಿಜ್ಞಾನ ಅಶಾಶ್ವತವಾದದ್ದು. ಜಂಜಡ ಜಗತ್ತಿನ ಬೆಂಬಿಡದ ದುಃಖವನು ಉಪಶಮನಗೊಳಿಸುವಂತೆ ಜಾಗೃತಿಯ ಮಾರ್ಗ ತೋರಿದ ಬುದ್ಧಗುರುವು – ನಾನು, ನನ್ನದು ಎಂಬ ಅಂಧ ವಿಶ್ವಾಸಕ್ಕೆ ಜೋತು ಬೀಳದೆ, ಮೋಹದಂಗು ತೊರೆದು, ವಾಸ್ತವತೆಯ ತಿಳಿವಿನಿಂದ ಹಸನಾದ ಬದುಕು ಕಟ್ಟಿಕೊಳ್ಳುವಂತೆ ಕಿಸಾಗೋತಮಿಯ ಒಳಗೊಂಡು ಇಡೀ ಮಾನವ ಲೋಕಕ್ಕೆ ಅನಿತ್ಯತೆಯ ಪರಿವರ್ತನಾ ಸ್ವರೂಪವನ್ನು ಯಥಾವತ್ತಾಗಿ ಮನವರಿಕೆ ಮಾಡಿಕೊಡುತ್ತಾರೆ.

'ಬುದ್ಧರ ದೃಷ್ಟಿಕೋನದ ಪ್ರಕಾರ ದುಃಖವು ಬಾಹ್ಯ, ಆಘಾತಕಾರಿ ಘಟನೆಗಳಿಂದ ಉಂಟಾಗುವುದಿಲ್ಲ. ಆದರೆ ನಮ್ಮ ಗ್ರಹಿಕೆಗಳನ್ನು ಮತ್ತು ಘಟನೆಗಳಿಗೆ ನಮ್ಮ ಪ್ರತಿಕ್ರಿಯೆಗಳನ್ನು ರೂಪಿಸುವ ಮನಸಿನ ಗುಣಗಳಿಂದ ಉಂಟಾಗುತ್ತದೆ. ಇವೆ ಮಾತುಗಳು ಮನಃಶಾಸ್ತ್ರಜ್ಞ ಆಲ್ಬರ್ಟ್ ಎಲ್ಲಿಸ್ 1953ರಲ್ಲಿ ಅವರು ಕ್ರಿಯಾ ಕೇಂದ್ರಿತ ಚಿಕಿತ್ಸೆಯನ್ನು ಪರಿಚಯಿಸುವಾಗ ಪುನರುಚ್ಚಾರಗೊಂಡವು.' ಹಾಗೆಯೇ ಬುದ್ಧನ 'ಸಾವಿಲ್ಲದ ಮನೆಯ ಸಾಸಿವೆ' ಚಿಕಿತ್ಸಾ ಪ್ರಯೋಗವನ್ನು ವೈಜ್ಞಾನಿಕವಾಗಿ ಕೋಗ್ನಿಟಿವ್ ಬಿಹೇವಿಯರ್ ಥೆರಪಿ (ಸಿ.ಬಿ.ಟಿ. –ಜ್ಞಾನ ಗ್ರಹಣದ ವರ್ತನೆಯ ಚಿಕಿತ್ಸೆ) ಎಂದು ಕರೆದಿರುವ ಮನಃಶಾಸ್ತ್ರ ಬುದ್ಧನ ಚಿಕಿತ್ಸಕ ಮಾದರಿಯನ್ನು ಅನುಕರಣ ಯೋಗ್ಯವೆಂದು ಪ್ರಬಂಧಿಸುತ್ತದೆ. ಬುದ್ಧನ ಈ ಮಾರ್ಗದರ್ಶಿಕೆ ಮನ್ವಂತರಗಳಿಗೂ ಧನ್ವಂತರಿಯ ಭೈಷಜ ಗುಣಗಂಧ ಹೊಂದಿದೆ ಎಂಬುದರಲ್ಲಿ ಆಸ್ಪದವಿಲ್ಲ.

ಗೀತನಾಟಕ ಪ್ರಕಾರಗಳಲ್ಲಿ ಉತ್ತಮ ಚೌಕಟ್ಟುಳ್ಳ ನಾಟಕವಾಗಿ ಸುಸಂಬದ್ಧ ಕಾವ್ಯಾತ್ಮಕ ಪದ ಬಳಕೆಯಿಂದ ಸುಲಲಿತವಾಗಿ ಸಾಗುವ 'ಕಿಸಾಗೋತಮಿ' ನಾಟಕದ

ನಿರೂಪಣಾ ಶೈಲಿ ಶಕ್ಯವಾದುದು. 'ಪಾಳಿ' ಸಾಹಿತ್ಯದಲ್ಲಿನ ಮೂಲ ಆಕರಕೆ ತುಂಬಾ ಹತ್ತಿರವಾದ ಕಥಾಹಂದರವನ್ನು ಈ ನಾಟಕ ಹೊಂದಿದ್ದರೂ ಕಿಸಾಗೋತಮಿಯ ಪೂರ್ವಪರ ವಿಚಾರ ಗೌಣವಾಗಿದ್ದು, ಮಿಂಚಿ ಮರೆಯಾಗುವ ಪಾತ್ರವಾಗಿ 'ಸುಜಾತ' ಕಂಡುಬರುತ್ತಾಳೆ. ಮನೆಯಾಕೆ ಪಾತ್ರಗಳು ತಮ್ಮ ಕರ್ತವ್ಯವನ್ನು ಪುಷ್ಟಿದಾಯಕವಾಗಿ ಪ್ರತಿಕ್ರಿಯಿಸುತ್ತವೆ. ಒಟ್ಟಾರೆ ಅಸ್ತಿತ್ವದಲ್ಲಿರುವ ವಿಶ್ವದ ಎಲ್ಲಾ ಜೈವಿಕ, ಅಜೈವಿಕ ವಸ್ತುಗಳಿಗೂ ಅನ್ವಯವಾಗುವ ಅನಿತ್ಯ ಅಥವಾ ಅಶಾಶ್ವತತೆಯ ಭೌತಿಕ ಗುಣಲಕ್ಷಣದ ಸ್ವರೂಪವನ್ನು 'ಬುದ್ಧ ಶಾಸನ'ದ ಬದ್ಧತೆಯಲ್ಲಿ ನಿಬಂಧಿಸಲ್ಪಟ್ಟಿರುವ ಕಾರಂತರ ಕಿಸಗೊತಮಿ ಉತ್ತಮ ಬೌದ್ಧ ಗೀತನಾಟಕವೆಂದು ಕರೆಸಿಕೊಳ್ಳಬಲ್ಲ ತಾತ್ವಿಕ ನೆಲೆ ಹೊಂದಿದೆ.

**ಪರಾಮರ್ಶನ ಗ್ರಂಥಗಳು:**


1. ಮಾಲಿನಿಮಲ್ಯ ಬಿ. (ಸಂ.), (2005), ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ: ಗೀತನಾಟಕಗಳು – ಕಿಸಾಗೋತಮಿ (ಸಂಪುಟ–24), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
2. ಉದಯ್‌ಕುಮಾರ್ ಹಬ್ಬು, (2015), ಬುದ್ಧತ್ವ – ಸಂತೋಷಕ್ಕೊಂದೆ ದಾರಿ, ಕಿನ್ನಿಗೋಳಿ: ಅನಂತ ಪ್ರತಿಭಾ ಪ್ರಕಾಶನ.
3. ಮರುಳಸಿದ್ದಪ್ಪ ಕೆ., (1993), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಲಿಪಿ ಪ್ರಕಾಶನ.